ಕರ್ನಾಟಕ ಸರ್ಕಾರ

ಜಂಟಿ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ, ಬೆಂಗಳೂರು-09
ದೂ.ಸಂ:22242943, ಫ್ಯಾಕ್ಸ್ :22271998, ಇ-ಮೇಲ್: jd_mms@yahoo.co.in

ಸಂಖ್ಯೆ:ಎ೦8(ಎ೦7)ಮ.ಉ.ಯೋ/ಸುಪ್ರೀಂ ಕೋರ್ಟ್. 4/2016-17

ದಿನಾಂಕ: 09-05-2017

## ಸುತ್ತೋಲೆ

ವಿಷಯ : ಮಧ್ಯಾಹ್ನ ಉಪಹಾರ ಯೋಜನೆಯ ಶಾಲಾವಾರು ಮಾಹಿತಿಯನ್ನು ಸಂಗ್ರಹಿಸಿ ಇಲಾಖಾ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವ ಬಗ್ಗೆ.

ಉಲ್ಲೇಖ:
1. ನಿರ್ದೇಶಕರು, ಎಂ.ಹೆಚ್.ಆರ್.ಡಿ., ನವದೆಹಲಿ ಯವರ ಪತ್ರ ಸಂಖ್ಯೆ10-23/ 2013, ಇಇ-5(MDM-1-2) ದಿನಾಂಕ 9.3.2017
2. ಅಧೀನ ಕಾರ್ಯದರ್ಶಿ, ಭಾರತ ಸರ್ಕಾರ ಎಂ.ಹೆಚ್.ಆರ್.ಡಿ., ನವ ದೆಹಲಿಯವರ ಪತ್ರ ಸಂಖ್ಯೆ10-23/2013,ಇಇ-5(MDM-1-2) ದಿನಾಂಕ 30.3.2017.
3. ಈ ಕಛೇರಿ ಸುತ್ತೋಲೆ ಸಂಖ್ಯೆ:ಎ೦8(ಎ೦7)ಅದಾ/ಸುಪ್ರೀಂಕೋರ್ಟ್4/2016-17 ದಿನಾಂಕ: 21.04.2017 ಹಾಗೂ ದಿನಾಂಕ: 03.05.2017

* * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಘನ ಸರ್ವೋಚ್ಛ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ :618/2013ರಕ್ಕೆ ಸಂಬಂಧಿಸಿದಂತೆ, ದಿನಾಂಕ 23.03.2017ರಲ್ಲಿ ನೀಡಿರುವ ಮಧ್ಯಂತರ ತೀರ್ಪಿನ ಪ್ರಕಾರ ರಾಜ್ಯದಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯನ್ನು ಪಡೆಯುತ್ತಿರುವ ಎಲ್ಲಾ ಶಾಲೆಗಳಿಂದ School Wise Charts ಶೀರ್ಷಿಕೆಯಡಿ ನೀಡಿರುವ ನಮೂನೆಯಲ್ಲಿ ಮಾಹಿತಿಯನ್ನು ಭರ್ತಿ ಮಾಡಲು ಅನುಸರಿಸಬೇಕಾದ ಸೂಚನೆಗಳು ಮತ್ತು ವಿವರಗಳನ್ನು ಉಲ್ಲೇಖ(3)ರ ಸುತ್ತೋಲೆಗಳಲ್ಲಿ ವಿವರವಾಗಿ ತಿಳಿಸಲಾಗಿದೆ.

ಸದರಿ ಸುತ್ತೋಲೆಗಳಲ್ಲಿ ತಿಳಿಸಿರುವ ಸೂಚನೆ ಮತ್ತು ಸಲಹೆಗಳ ಜೊತೆಗೆ ಈ ಕೆಳಗಿನಂತೆ ಕ್ರಮವಹಿಸಲು ತಿಳಿಸಿದೆ.

1. ಮಾಹಿತಿಗಳನ್ನು ಮಾನ್ಯ ಸರ್ವೋಚ್ಛ ನ್ಯಾಯಾಲಯಕ್ಕೆ ಸಲ್ಲಿಸಬೇಕಾಗಿರುವುದರಿಂದ ಆಂಗ್ಲ ಭಾಷೆಯಲ್ಲಿಯೇ ನಮೂನೆಯನ್ನು ಭರ್ತಿ ಮಾಡಬೇಕು.
2. ನಮೂನೆಗಳನ್ನು ಅಪ್‌ಲೋಡ್ ಮಾಡುವ ಕಾರ್ಯವನ್ನು ದಿನಾಂಕ 15.06.2017ರೊಳಗೆ ಪೂರ್ಣಗೊಳಿಸಬೇಕು.
3. ಶಾಲೆಗಳಿಂದ ನಿಗದಿತ ನಮೂನೆಯಲ್ಲಿ ನಿಖರವಾದ ಮಾಹಿತಿಗಳನ್ನು ಮುಖ್ಯೋಪಾಧ್ಯಾಯರ ದೃಢೀಕರಣದೊಂದಿಗೆ ಸಹಾಯಕ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಇವರು ಪಡೆದುಕೊಳ್ಳಬೇಕು.
4. ತಾಲ್ಲೂಕು ಹಂತದಲ್ಲಿ ಸಹಾಯಕ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಇವರು ಪ್ರತಿ ಶಾಲೆಯಿಂದ ಪಡೆದ ನಮೂನೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ದೃಢೀಕರಿಸಬೇಕು.
5. ತಾಲ್ಲೂಕು ಹಂತದಲ್ಲಿಯೇ ನಮೂನೆಗಳನ್ನು ಅಪ್‌ಲೋಡ್ ಮಾಡಬೇಕು. ಅಪ್‌ಲೋಡ್ ಮಾಡುವ ಮೊದಲು ಶಿಕ್ಷಣಾಧಿಕಾರಿಗಳು, ಮಧ್ಯಾಹ್ನ ಉಪಹಾರ ಯೋಜನೆ, ಇವರು ಶೇಕಡ 10ರಷ್ಟು ನಮೂನೆಗಳನ್ನು ಹಾಗೂ ಜಂಟಿ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ ಇವರು ಶೇಕಡ 1ರಷ್ಟು ಸಂಖ್ಯೆಯ ನಮೂನೆಗಳನ್ನು ಕಡ್ಡಾಯವಾಗಿ ಪರಿಶೀಲಿಸಿ ದೃಢೀಕರಿಸಬೇಕು (ಶೇಕಡ 1ರಷ್ಟು ನಮೂನೆಗಳನ್ನು ಪರಿಶೀಲನೆಗಾಗಿ ರಾಜ್ಯ ಕಛೇರಿಗೆ ಸಲ್ಲಿಸುವುದು)
6. ಈ ನಿಟ್ಟಿನಲ್ಲಿ ಸಾಧಿಸಿದ ಪ್ರಗತಿಯನ್ನು ಮೂರು ದಿನಗಳಿಗೊಮ್ಮೆ ರಾಜ್ಯ ಕಛೇರಿಗೆ ಕಡ್ಡಾಯವಾಗಿ ನೀಡಿರುವ ನಮೂನೆಯಲ್ಲಿ ವರದಿ ಮಾಡಬೇಕು.
7. ವೆಬ್‌ಸೈಟ್‌ನಲ್ಲಿ ನಮೂನೆಗಳನ್ನು ಅಪ್‌ಲೋಡ್ ಮಾಡುವ ವಿಧಾನವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಸದರಿ ಕಾರ್ಯವನ್ನು ನಿಗದಿತ ಕಾಲಮಿತಿಯೊಳಗೆ ನಿರ್ವಹಿಸಬೇಕಾಗಿದ್ದು, ವಿಳಂಬವಾದಲ್ಲಿ ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಘನ ಸರ್ವೋಚ್ಛ ನ್ಯಾಯಾಲಯದಲ್ಲಿ ಖುದ್ದು ಹಾಜರಾಗಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದ ಆಗುಹೋಗುಗಳಿಗೆ ನೇರವಾಗಿ ನೀವೇ ಜವಾಬ್ದಾರರಾಗಿರುತ್ತೀರಿ. ಆದ್ದರಿಂದ ಸದರಿ ಕಾರ್ಯವನ್ನು ಆದ್ಯತೆಯಾಗಿ ಪರಿಗಣಿಸಿ ವಿಳಂಬಕ್ಕೆ ಅವಕಾಶವಿಲ್ಲದಂತೆ ನಿಗದಿತ ದಿನಾಂಕದೊಳಗೆ ಪೂರ್ಣಗೊಳಿಸಲು ಸೂಚಿಸಿದೆ.

(ವಿ. ಸುಮಂಗಲ) 9/5/17
ಜಂಟಿ ನಿರ್ದೇಶಕರು,
ಮಧ್ಯಾಹ್ನ ಉಪಹಾರ ಯೋಜನೆ.
9/5/17

ಪ್ರತಿಯನ್ನು:

1. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ರಾಜ್ಯದ ಎಲ್ಲಾ ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ, ಇವರಿಗೆ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ ಇವರಿಗೆ ಅಗತ್ಯ ಕ್ರಮಕ್ಕಾಗಿ.
4. ಕಛೇರಿ ಪ್ರತಿ.

G:\Web site-1.doc